# ವಿಧಾನ ಪರಿಷತ್ತಿನ ಮಾಜಿ ಸದಸ್ಯರಿಗೆ ನೀಡಲಾಗಿರುವ ಸೌಲಭ್ಯಗಳು:

**(ಅಧಿಸೂಚನೆ ಸಂಖ್ಯೆ:ಸಂವ್ಯಶಾಇ14ಶಾಸನ2012, ದಿ:28-4-2012ರನ್ವಯ)**

## 1.ನಿವೃತ್ತಿ ವೇತನ:

ಪ್ರತಿಯೊಬ್ಬ ಮಾಜಿ ಸದಸ್ಯರು ಸಲ್ಲಿಸಿರುವ ಸೇವಾ ಅವಧಿಯನ್ನು ಪರಿಗಣಿಸಿ ನಿವೃತ್ತಿವೇತನವನ್ನು ನೀಡಲಾಗುವುದು. 5 ವರ್ಷಗಳ ಒಂದು ಅವಧಿಗೆ ರೂ. 25,000/- (ಕನಿಷ್ಠ) ನಂತರದ ಪ್ರತಿ ಒಂದು ಅಧಿಕ ವರ್ಷಕ್ಕೆ ರೂ. 1000/- ರಂತೆ ರೂ. 35,000.00 (ಗರಿಷ್ಠ)

## 2.ಕುಟುಂಬ ನಿವೃತ್ತಿವೇತನ:

ಸದಸ್ಯರು ಅವರ ಸೇವಾವಧಿ ಮುಕ್ತಾಯಗೊಳ್ಳುವ ಮುಂಚೆಯೇ ಅಥವಾ ನಂತರ ಮೃತರಾದರೆ, ಆ ಸದಸ್ಯರ ಕುಟುಂಬದವರಿಗೆ ಮಾನ್ಯ ಸದಸ್ಯರಿಗೆ ನೀಡಬೇಕಾಗಿದ್ದ ನಿವೃತ್ತಿ ವೇತನದ ಅರ್ಧ ಭಾಗದಷ್ಟು ಕುಟುಂಬ ನಿವೃತ್ತಿವೇತನವನ್ನು ನೀಡಲಾಗುವುದು.

## 3.ಬಸ್ ಪಾಸ್ ಸೌಲಭ್ಯ:

ಮಾಜಿ ಸದಸ್ಯರು, ಒಬ್ಬ ಸಹಾಯಕರೊಂದಿಗೆ ಕ.ರಾ.ರ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಒಂದು ಬಸ್ ಪಾಸ್ ಅನ್ನು ನೀಡಲಾಗುವುದು. ಇದರ ವೆಚ್ಚವನ್ನು ಸಚಿವಾಲಯದಿಂದ ಭರಿಸಲಾಗುವುದು.

## 4.ವೈದ್ಯಕೀಯ ಸೌಲಭ್ಯಗಳು:

ಮಾಜಿ ಸದಸ್ಯರು ಮತ್ತು ಅವರ ಕುಟುಂಬದವರು ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ಚಿಕಿತ್ಸಾಲಯಗಳಲ್ಲಿ ಉಚಿತ ಸ್ಥಳಾವಕಾಶ ಹಾಗೂ ಚಿಕಿತ್ಸೆ ಪಡೆಯಲು ಮತ್ತು ಅಧಿಸೂಚಿತ ಆಸ್ಪತ್ರೆಗಳಲ್ಲಿ ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ಮಾಡಿದ ವೆಚ್ಚದ ಮರುಪಾವತಿಗೆ ಅರ್ಹರಾಗಿರುತ್ತಾರೆ. ಹಾಗೂ ಪ್ರತಿ ತಿಂಗಳು ರೂ.4,000/-ಗಳ ವೈದ್ಯಕೀಯ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

## 5..ರೈಲ್ವೆ ಪ್ರಯಾಣ ಮರುಪಾವತಿ

ಮಾಜಿ ಸದಸ್ಯರು, ಒಬ್ಬ ಸಹಾಯಕರೊಂದಿಗೆ ಮೊದಲ ದರ್ಜೆ/ಎರಡನೇ ದರ್ಜೆ ಎ.ಸಿ ರೈಲಿನಲ್ಲಿ ಪ್ರಯಾಣಿಸಲು ಒಂದು ವರ್ಷಕ್ಕೆ ರೂ. 1,00,000/-ಗಳನ್ನು ಪಡೆಯಲು ಅರ್ಹರಿರುತ್ತಾರೆ.